<u>ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು</u>

ಸಿ.ಸಿ.ನಂ. **1112/2021**

ಸಿಡಬ್ಲೂ:1 ಪಿಡಬ್ಲೂ:1

ಸಾಕ್ಷಿದಾರರ ಹೆಸರು : ನಾಗಮ್ಮ
ವಯಸ್ಸು : ಸುಮಾರು 60 ವರ್ಷ
ಉದ್ಯೋಗ : ಕೂಲಿ
ಸ್ಥಳ : ಕುಡುಮಲಕುಂಟೆ

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 28-05-2025**
**ಮುಖ್ಯ ವಿಚಾರಣೆ ಮಾನ್ಯ : ಶ್ರೀ ಎ.ಪಿ.ಪಿ. ಯವರಿಂದ**

ಮೃತ ರಾಮಕೃಷ್ಣಪ್ಪ ನನ್ನ ಮಗ. ಸುಮಾರು **5** ವರ್ಷಗಳ ಹಿಂದೆ ಕುಡುಮಲಕುಂಟೆ ಗ್ರಾಮದಲ್ಲಿ ಸುಮಾರು ಸಂಜೆ **6** ಗಂಟೆ ಸಮಯದಲ್ಲಿ ಯಾರೋ ಸ್ನೇಹಿತ ಕರೆದಿದ್ದರು ಎಂದು ನನ್ನ ಮಗ ರಾಮಕೃಷ್ಣ ಹೋಗಿ ಬರುವಾಗ ಹಿಂದೂಪುರ ಕಡೆಯಿಂದ ಆಟೋ ಬಂದು ನನ್ನ ಮಗನಿಗೆ ಡಿಕ್ಕಿ ಹೊಡೆದು, ಅದರ ಪರಿಣಾಮ ಮೊಣಕೈ, ಕಾಲಿಗೆ ಮತ್ತು ತಲೆಗೆ ಅಪಘಾತವಾಗಿರುತ್ತದೆ. ಆಟೋ ಡ್ರೈವರ್ ನನ್ನ ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದ. ಸಂಜೀವರಾಯಪ್ಪ ನಮ್ಮ ಮನೆಗೆ ಬಂದು ಅಪಘಾತವಾಗಿರುವ ವಿಷಯ ಹೇಳಿದ್ದರು. ನಾವೆಲ್ಲರೂ ಗೌರಿಬಿದನೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆವು. ತದನಂತರ ಸರ್ಕಾರಿ ಆಸ್ಪತ್ರೆಯಲ್ಲಿ ಹೆಚ್ಚುವರಿ ಚಿಕಿತ್ಸೆಗಾಗಿ ನಾವು ನನ್ನ ಮಗನನ್ನು ಮರುದಿನ ಬೆಂಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಬೆಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಟ್ಟರೂ ಗುಣಮುಖರಾಗುವುದಿಲ್ಲ ಎಂದು ಮನೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು ಅದೇ ಪ್ರಕಾರ ನಾವು ನನ್ನ ಮಗನನ್ನು ಗೌರಿಬಿದನೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆವು.

ಈಗ ದೂರಿನ ಒಂದು ದಾಖಲಾತಿಯನ್ನು ತೋರಿಸಿ ಸಾಕ್ಷಿ ಅದನ್ನು ಗುರುತಿಸಿದ್ದರಿಂದ, ಸದರಿ ದೂರನ್ನು ನಿಪಿ-**1** ಎಂದು ಹಾಗೂ ಅದರ ಮೇಲಿರುವ ಹೆಬ್ಬೆಟ್ಟಿನ ಗುರುತನ್ನು ನಿಪಿ-**1** ಎ ಎಂದು ಗುರುತಿಸಲಾಯಿತು.

ಈಗ ಸ್ಥಳ ಮಹಜರ್ ಅನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿಪಿ-**2** ಹಾಗೂ ಅದರ ಮೇಲಿರುವ ಹೆಬ್ಬೆಟ್ಟಿನ ಗುರುತನ್ನು ನಿಪಿ-**2** ಎ ಎಂದು ಗುರುತಿಸಲಾಯಿತು.

ಸಾಕ್ಷಿಗೆ ವಾಹನದ ಫೋಟೋಗಳನ್ನು ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿದ್ದರಿಂದ ಅದನ್ನು ನಿಪಿ-**3** ಎಂದು ಗುರುತಿಸಲಾಯಿತು.

ಸ್ಥಳ ಮಹಜರ್ ಸಮಯದಲ್ಲಿ ಕೃಷ್ಣಪ್ಪ, ಸಂಜೀವರಾಯಪ್ಪ, ರಂಗಣ್ಣ, ಅಶ್ವತಪ್ಪ ಮತ್ತು ಗಂಗಾಧರಪ್ಪ ರವರು ಸಹಿ ಮಾಡಿದ್ದರು.

ದಿನಾಂಕ **11.10.2020** ರ ದೂರನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಅದನ್ನು ಗುರುತಿಸಿದ್ದರಿಂದ ನಿಪಿ-**4** ಎಂದು ಹಾಗೂ ಅದರ ಮೇಲಿರುವ ಹೆಬ್ಬೆಟ್ಟಿನ ಗುರುತನ್ನು ನಿಪಿ-**4** ಎ ಎಂದು ಗುರುತಿಸಲಾಯಿತು.

ಸರ್ಕಾರಿ ಆಸ್ಪತ್ರೆಯಲ್ಲಿ **3** ದಿನ ನನ್ನ ಮಗ ಚಿಕಿತ್ಸೆಯಲ್ಲಿದ್ದು, ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಬೆಳಗ್ಗೆ **10** ಗಂಟೆಯ ಸಮಯದಲ್ಲಿ ಮೃತ ಪಟ್ಟಿರುತ್ತಾರೆ. ಯಾವ ದಿನಾಂಕ ಎಂಬುದು ನನಗೆ ಈಗ ನೆನಪಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷ ನುಡಿದ್ದರಿಂದ ಸ.ಸ.ಅರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೋರಿ ಹಾಗೂ ಪಾಟೀ ಸವಾಲಿಗೆ ಒಳ ಪಡಿಸಲು ಅನುಮತಿ ಕೋರಿರುತ್ತಾರೆ. ನ್ಯಾಯಾಲವು ಸಂಪೂರ್ಣ ಸಾಕ್ಷ್ಯವನ್ನು ಗಮನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಗಣಿಸಿ ಸ.ಸ.ಅರವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟಿ ಸವಾಲು ಮಾನ್ಯ ಎ.ಪಿ.ಪಿ.ಯವರಿಂದ**

ದಿನಾಂಕ **09.10.2020** ರಂದು ಸಂಜೆ **6** ಗಂಟೆ ಸಮಯದಲ್ಲಿ ಕುಡುಮಲುಕುಂಟೆ ಗೇಟ್ ಬಳಿ ನನ್ನ ಮಗ ರಾಮಕೃಷ್ಣನಿಗೆ ಅಪಘಾತ ಆಗಿದೆ ಎಂದರೆ ಸರಿ. ಆಟೋ ನಂ. **KA43-7782** ಅತಿವೇಗ ಹಾಗೂ ಅಜಾಗರೂಕತೆಯಿಂದ ನನ್ನ ಮಗನಿಗೆ ಅಪಘಾತ ಉಂಟು ಮಾಡಿಸಿದೆ ಎಂದು ನನ್ನ ದೂರಿನಲ್ಲಿ ಬರೆಸಿದ್ದೇನೆ ಎಂದರೆ ಸರಿ. ಸದರಿ ಆಟೋ ಗೌರಿಬಿದನೂರು ನಾಗರೆಡ್ಡಿ ಬಡಾವಣೆಗೆ ಸೇರಿದ್ದು ಎಂದು ಬರೆಸಿದ್ದೇನೆ ಎಂದರೆ ಸರಿ.

ದಿನಾಂಕ **10.10.2020** ರಂದು ಪೋಲೀಸರು ಘಟನಾ ನಡೆದ ಸ್ಥಳದ ಪಂಚನಾಮೆಯನ್ನು ಸುಮಾರು **8.30** ರಿಂದ **9.30** ರ ಸಮಯದಲ್ಲಿ ಬರೆದಿದ್ದರು ಎಂದರೆ ಸರಿ. ಕೃತ್ಯ ನಡೆದ ಸ್ಥಳವನ್ನು **(CW-3)** ಕೃಷ್ಣಪ್ಪ ರವರು ತೋರಿಸಲಾಗಿ, ಪೋಲೀಸರು ಘಟನಾ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಬರೆದಿದ್ದರು ಎಂದರೆ ಸರಿ. ಪಂಚನಾಮೆಯ ಸಮಯದಲ್ಲಿ ಪೋಲೀಸರು ಸದರಿ ಆಟೋವನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ. ಸದರಿ ಪಂಚನಾಮೆಗೆ ಚಾಸಾ-**3** ರಿಂದ **5** ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ.

ದಿನಾಂಕ **11.10.2020** ರಂದು ನನ್ನ ಮಗ ತೀರಿಕೊಂಡ ವಿಚಾರವನ್ನು ಪೋಲೀಸರಿಗೆ ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿ.

ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ.ಸ. ಇದೆ

ಸಹಿ/-
ಹೆ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು